62

<u>ಕರ್ನಾಟಕ ಸರ್ಕಾರ</u>

<u>ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.</u>

<u>ಸಂ.ಕಂ/ಹಬ/ವಿವಾದ/36/2014-15</u> <u>ದಿ:25-07-2016</u>

<u>ವಾದಿಗಳು</u> | <u>ವಿರುದ್ದ</u> | <u>ಪ್ರತಿವಾದಿಗಳು</u>

1.ಆಲಂಸಾಬ್. ಟಿ.ರಾಂಪುರ ಗ್ರಾಮ
2.ಮಾಬಮ್ಮ ಗಂಡ ಲೇಟ್ ಭಕ್ಷಿಸಾಬ್.
2 ನೇ ವಾರ್ಡ್, ನಗರೇಶ್ವರ ಗುಡಿ ಹಿಂದೆ.
ದೇಶನೂರು ರಸ್ತೆ. ಸಿರುಗುಪ್ಪ.

ಖಲೀಲ್‌ಸಾಬ್ ತಂದೆ ಆಲಂಸಾಬ್
ಟಿ.ರಾಂಪುರ ಗ್ರಾಮ.
ಸಿರುಗುಪ್ಪ ತಾಲೂಕು.

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಟಿ.ರಾಂಪುರ | 48/ಎಬಿ/1 | 2-23 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಟಿ.ರಾಂಪುರ ಗ್ರಾಮದ ಸ,ನಂ:48/ಎಬಿ/1 ವಿ:2-23 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ 1.ಆಲಂಸಾಬ್ ಮತ್ತು 2.ಭಕ್ಷಿಸಾಬ್ ತಂದೆ ಅಕ್ಬರ್‌ಸಾಬ್ ಹೆಸರಿಗೆ ಜಂಟಿಯಾಗಿ ಪಟ್ಟಾ ಇದ್ದು, ಸದ್ರಿಯವರಲ್ಲಿ ಭಕ್ಷಿಸಾಬ್ ಇವರು ದಿ:04-10-2009 ರಂದು ಮರಣ ಹೊಂದಿರುವುದರಿಂದ, ವಾರಸು ಪತ್ನಿಯಾದ ಮಾಬಮ್ಮ ಇವರು ತನ್ನ ಹೆಸರಿಗೆ ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಕೋರಿ ಸಲ್ಲಿಸಿದ ಅರ್ಜಿ ಪ್ರಯುಕ್ತ, ಸದ್ರಿಯವರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಟಿ.ರಾಂಪುರ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ **ಖಲೀಲ್‌ಸಾಬ್ ತಂದೆ ಆಲಂಸಾಬ್** ಇವರು **"**ಪ್ರಸ್ತಾಪಿತ ಜಮೀನು ತಮ್ಮ ತಂದೆ ಹಾಗೂ ಚಿಕ್ಕಪ್ಪ ಭಕ್ಷಿಸಾಬ್ ಇಬ್ಬರ ಹೆಸರಿನಲ್ಲಿದ್ದು, ಪ್ರಸ್ತುತ ತನ್ನ ಚಿಕ್ಕಮ್ಮ ಇವರು ಹಕ್ಕು ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದು, ಸದ್ರಿಯವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು**"** ದಿ:05-08-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ಸದ್ರಿ ಪ್ರಕರಣವನ್ನು ವಿವಾದಾಸ್ಪದವೆಂದು ಪರಿಗಣಿಸಿ ಹ,ಬ.ಸಂಖ್ಯೆ:02/2014-15 ದಿನಾಂಕ:26-08-2014 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:15-11-2014 ರಿಂದ

ಸಿರುಗುಪ್ಪ

20-06-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ ಮಾಬಮ್ಮ ಹಾಜರು, ಇವರ ಪರ ವಕೀಲರು ವಕಾಲತ್ ಸಲ್ಲಿಸಿ, ಲಿಖಿತ ವಾದ ಮಂಡಿಸಿರುತ್ತಾರೆ. ಪ್ರತಿವಾದಿ (2) ಎರಡು ಬಾರಿ ಮಾತ್ರ ವಿಚಾರಣೆಗೆ ಹಾಜರಾಗಿರುತ್ತಾರೆ. ಹಾಗೂ ಯಾವುದೇ ಪೂರಕ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ, ವಾದಿಯ ಪರ ವಕೀಲರು ಮಂಡಿಸಿದ ಲಿಖಿತ ಹೇಳಿಕೆ ಪರಿಶೀಲಿಸಲಾಯಿತು. ಪ್ರಸ್ತಾಪಿತ ಜಮೀನು ಅರ್ಜಿದಾರಳ ಗಂಡ ಹಾಗೂ ಭಾವ ಆಲಂಸಾಬ್ ಹೆಸರಿಗೆ ಜಂಟಿ ಪಟ್ಟಾ ಇದ್ದು, ಪ್ರಸ್ತುತ ಭಕ್ಷಿಸಾಬ್ ಇವರು ಮರಣ ಹೊಂದಿರುವುದರಿಂದ, ವಾರಸು ಪತ್ನಿಯ ಹೆಸರಿಗೆ ಆಲಂಸಾಬ್ ಇವರ ಜೊತೆ ಜಂಟಿಯಾಗಿ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ.

ಒಟ್ಟಾರೆ ಸದ್ರಿ ಪ್ರಕರಣದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಹಾಗೂ ಅರ್ಜಿದಾರಳ ಪರ ಮಂಡಿಸಿದ ಲಿಖಿತ ಹೇಳಿಕೆ ಪ್ರಕಾರ ಸಿರುಗುಪ್ಪ ತಾಲೂಕು ಟಿ.ರಾಂಪುರ ಗ್ರಾಮದ ಸ,ನಂ:48/ಎಬಿ/1 ವಿ:2-23 ಎಕ್ರೆ ಜಮೀನಿಗೆ ಸಂಭಂದಿಸಿ, ಪೋತಿ ವಾರಸು ಮೇರೆಗೆ ಅರ್ಜಿದಾರರ ಹೆಸರಿಗೆ ಇತರೆ ಪಟ್ಟಾದರರ ಜೊತೆ ಜಂಟಿಯಾಗಿ ಪಟ್ಟಾ ಬದಲಾವಣೆ ಮಾಡಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/36/2014-15** **ದಿ:25-07-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಟಿ.ರಾಂಪುರ ಗ್ರಾಮದ ಸ,ನಂ:48/ಎಬಿ/1 ವಿ:2-23 ಎಕ್ರೆ ಜಮೀನು ಹಾಲಿ ಪಹಣಿ ದಾಖಲೆ ಪ್ರಕಾರ 1.ಆಲಂಸಾಬ್, 2.ಭಕ್ಷಿಸಾಬ್ ತಂದೆ ಅಕ್ಬರ್‌ಸಾಬ್ ಹೆಸರಿಗೆ ಜಂಟಿ ಪಟ್ಟಾ ಇದ್ದು, ಸದ್ರಿಯವರಲ್ಲಿ ಭಕ್ಷಿಸಾಬ್ ಇವರು ದಿ:04-10-2009 ರಂದು ಮರಣ ಹೊಂದಿರುವುದರಿಂದ, **ಆಲಂಸಾಬ್** ಇವರ ಜೊತೆಗೆ ಭಕ್ಷಿಸಾಬ್ ಇವರ ವಾರಸು ಪತ್ನಿಯಾದ **ಮಾಬಮ್ಮ ಗಂಡ ಲೇಟ್ ಭಕ್ಷಿಸಾಬ್** ಇವರ ಹೆಸರಿಗೆ ಜಂಟಿಯಾಗಿ ಪೋತಿ ಪಟ್ಟಾ ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:25-07-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

Copy Received